ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 03.07.2024.

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ.ಎನ್.ಟಿ. ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ಜೊತೆ 6 ಎಕರೆ 25 ಗುಂಟೆಗೆ ವ್ಯವಹಾರ ಮಾಡಿರುತ್ತಾರೆ ಎಂದರೆ, ಸಾಕ್ಷಿ 6 ಎಕರೆ 25 ಗುಂಟೆ ಪಹಣಿಯಲ್ಲಿ ಇರುತ್ತದೆ, ಆದರೆ ಸದರಿ ಜಮೀನಿನ ಮಧ್ಯ ಒಂದು ರಸ್ತೆ ಹೋಗಿದ್ದು, ಸಾಗುವಳಿ ಜಮೀನು ಎಷ್ಟು ಬರುತ್ತದೋ ಅಷ್ಟಕ್ಕೆ ವ್ಯವಹಾರ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸರ್ವೆ ಮಾಡಿಸುವ ಕಾಲಕ್ಕೆ ಹೆಚ್ಚು ಕಡಿಮೆ ಜಮೀನು ಬಂದಿರೂ ಕೂಡಾ 6 ಎಕರೆ 25 ಗುಂಟೆಗೆ ಹಣ ಕೊಡಬೇಕೆಂದು

ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಕಲಬುರಗಿಯ ನ್ಯಾಯಾಲಯದ ಆವರಣದಲ್ಲಿ ಸಾಕಷ್ಟು ಕಂಪ್ಯೂಟರ್ ಡಿಟಿಪಿ ಕೆಲಸ ಮಾಡುವವರು ಇರುತ್ತಾರೆ ಎಂದರೆ ಸರಿ, ಅವರ ಜೊತೆ ಬೆರಳಚ್ಚು ಮಾಡುವವರು ಇರುತ್ತಾರೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಎಲ್ಲರೂ ಸದ್ಯ ಗಣಕೀಕೃತವಾಗಿಯೇ ಬೆರಳಚ್ಚು ಮಾಡಿಸಿರುತ್ತಾರೆ, ಮ್ಯಾನವಲ್ ಟೈಪಿಂಗ್‌ನಿಂದ ಮಾಡಿಸುವುದಿಲ್ಲ ಎಂದರೆ ಸಾಕ್ಷಿ ಕಂಪ್ಯೂಟರ್ ಕೆಲಸ ಮಾಡುವವರ ಹತ್ತಿರ ತುಂಬಾ ರೆಷ್ ಇತ್ತು ಆ ಕಾರಣ ಟೈಪಿಂಗ್ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ 3 ತಿಂಗಳ ಕಾಲ ಮಾತ್ರ ಖರೀದಿ ಕರಾರು ಪತ್ರ ಮಾಡಿಕೊಡಲು ಅವಧಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 16 ತಿಂಗಳ ಇತ್ತು ಎಂದು ನುಡಿಯುತ್ತಾರೆ. ನಿಪಿ-3 ರ 2 ನೇ ಪುಟದಲ್ಲಿ ಬ್ಲೇಡ್ ಮುಖಾಂತರ ಅಳಕಿಸಿ ಪುನಃ ಬೆರಳಚ್ಚು ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಬ್ಲೇಡ್ ಮುಖಾಂತರ ಅಳಕಿಸಿದ ಭಾಗವನ್ನು ತಜ್ಞರ ವರದಿಗೆ ಕಳುಹಿಸಿಕೊಡಲು ನನ್ನದು ಯಾವುದೇ ಅಭ್ಯಂತರ ಇರುವುದಿಲ್ಲ.

ನಿಪಿ-3 ರ 2 ನೇ ಪುಟದಲ್ಲಿ ಉದ್ದೇಶ ಪೂರ್ವಕವಾಗಿ ಅಳಕಿಸಿ ತಿದ್ದುಪಡೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-3 ರ 2 ನೇ ಪುಟದಲ್ಲಿ ನಾನು ಉದ್ದೇಶ ಪೂರ್ವಕವಾಗಿ ಬ್ಲೇಡ್‌ನಿಂದ ಅಳಕಿಸಿ ತಿದ್ದುಪಡೆ ಮಾಡಿ, 1 ನೇ ಪ್ರತಿವಾದಿಗೆ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೋಸದ ದೃಷ್ಟಿಕೋನ ಇಟ್ಟುಕೊಂಡು ನಾನು ಈ ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ, 2 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿಕೊಟ್ಟ ಆಧಾರದ ಮೇಲೆ, 2 ನೇ ಪ್ರತಿವಾದಿ ಹೆಸರು ಆರ್‌ಟಿಸಿಗಳಲ್ಲಿ ಬಂದರೂ ಕೂಡಾ ನಾನು ಅದಕ್ಕೆ ಯಾವುದೇ ತಕರಾರು ಮಾಡಿಲ್ಲ ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ.

ನಾನು ದಾವೆಯಲ್ಲಿ ಹೇಳಿರುವ ಹಾಗೇ ದಿಃ 11.07.2022 ರಂದು ದಾವಾ ಪಹಣಿ ಪಡೆದುಕೊಂಡ ನಂತರ ನನಗೆ 2 ನೇ ಪ್ರತಿವಾದಿ ಹೆಸರು ಬಂದ ಬಗ್ಗೆ ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುನ್ನು ಖರೀದಿಸುವ ಸಾಮರ್ಥ್ಯ ಇಲ್ಲದೇ ಇರುವ ಕಾರಣ, ನಾನೇ ಮುಂದೆ ನಿಂತು 2 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ 2 ನೇ ಪ್ರತಿವಾದಿ ಶಾಮಿಲ್ ಆಗಿ ಈ ಸುಳ್ಳು ದಾವೆಯನ್ನು 1 ನೇ ಪ್ರತಿವಾದಿ ಮೇಲೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿಕೊಟ್ಟ ನಂತರ ನನ್ನ ಹಾಗೂ 2 ನೇ ಪ್ರತಿವಾದಿಯ ನಡುವೆ ವೈಮನಸ್ ಇದ್ದು, ಆ ಕಾರಣ 1 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 25.06.2022 ರಂದು ನಾನು ಉಳಿದ ಹಣವನ್ನು ಕೊಟ್ಟು, 1 ನೇ ಪ್ರತಿವಾದಿಯಿಂದ ಕ್ರಯ ಕರಾರು ಪತ್ರ ಮಾಡಿಕೊಳ್ಳಲು ಅವರ ಮನೆಗೆ ಹೋಗಿದ್ದ ಹಾಗೂ ಅವರು ನಿರಾಕರಿಸಿರುತ್ತಾರೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಫಾರಂ ನಂ.11-E ಆದ ನಂತರ ಸರ್ವೆ ಕಾಲಕ್ಕೆ ಕಡಿಮೆ ಅಳತೆ ಬಂದರೆ ಕಟ್ ಮಾಡಿ ಹಾಗೂ ಮೌಲ್ಯವನ್ನು ಕಡಿಮೆ ಮಾಡಿ ಕೊಡುತ್ತೇವೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಸರ್ವೆ ಕಾಲಕ್ಕೆ ದಾವಾ ಸ್ವತ್ತು 6 ಎಕರೆ 25 ಗುಂಟೆ ಅಳತೆ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಹೇಳಿದಂತೆ ದಾವಾ ಸ್ವತ್ತು 4 ಎಕರೆ 35 ಗುಂಟೆ ಬಂದಿದೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ.

ನಿಪಿ-6 ರಲ್ಲಿ ಕೂಡಾ ದಾವಾ ಸ್ವತ್ತನ್ನು 6 ಎಕರೆ 25 ಗುಂಟೆ ತೋರಿಸಿರುತ್ತಾರೆ ಎಂದರೆ ಸರಿ. ನಿಪಿ-6 ರಂತೆ ರೂ.15,57,000/- ಹಣ ತೋರಿಸಿದರೂ ಕೂಡಾ, 2 ನೇ ಪ್ರತಿವಾದಿ, 1 ನೇ ಪ್ರತಿವಾದಿಗೆ ರೂ.25,00,000/- ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕಡಿಮೆ ಮೌಲ್ಯ ತೋರಿಸಿ, ನಿಪಿ-6 ರ ಕ್ರಯ ಪತ್ರವನ್ನು ಸೃಷ್ಠಿ ಮಾಡಿಕೊಂಡ ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಜವಾದ ಕ್ರಯ ಪತ್ರವನ್ನು 2 ನೇ ಪ್ರತಿವಾದಿಗೆ ಮಾಡಿಕೊಟ್ಟಿದ್ದು, ಅದು ಬೋಗಸ್ ಇರುವುದಿಲ್ಲ ಎಂದರೆ ಸರಿಯಲ್ಲ.

ದಿಃ 23.02.2022 ರಂದು ರೂ.5 ಲಕ್ಷ ಹಣವನ್ನು 2 ನೇ ಕಂತಿನ ರೂಪವಾಗಿ 1 ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ 1 ನೇ ಪ್ರತಿವಾದಿ ಸದರಿ ಹಣವನ್ನು ತೆಗೆದುಕೊಳ್ಳಲು ತಯಾರು ಇರಲಿಲ್ಲ, ಆದರೆ ನಾನು ಅವರಿಗೆ ಬೆದರಿಸಿ ಧಮಕಿ ಕೊಟ್ಟು ನಿಪಿ-5 ರ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1 ನೇ ಪ್ರತಿವಾದಿ, 2 ನೇ ಪ್ರತಿವಾದಿಯನ್ನು ಕರೆದು ಅವರ ಸಮಕ್ಷಮ 1 ನೇ ಪ್ರತಿವಾದಿ ರೂ.5 ಲಕ್ಷ ಹಣ ಪಡೆದಿದ್ದು, ಆಗ ನಾನು 1 ತಿಂಗಳ ಕಾಲಾವಕಾಶವನ್ನು ಕೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ತೆಗೆದುಕೊಂಡ 1 ತಿಂಗಳ ಕಾಲಾವಧಿಯಲ್ಲಿ ನೋಂದಣಿ ಮಾಡಿಕೊಳ್ಳದೇ ಇರುವ ಕಾರಣ, 1 ನೇ ಪ್ರತಿವಾದಿ, 2 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಹೈದ್ರಾಬಾದ್ ಆಸ್ಪತ್ರೆಯಲ್ಲಿ ದಾಖಲಾದಾಗ ನಾನು ಉಳಿದ ಹಣ ಕೊಟ್ಟು ಕ್ರಯ ಪತ್ರ ಮಾಡಿಕೊಳ್ಳದೇ ಇರುವ ಕಾರಣ, 1 ನೇ ಪ್ರತಿವಾದಿ, 2 ನೇ

ಪ್ರತಿವಾದಿಯಿಂದ ಹಣ ಪಡೆದುಕೊಂಡು ಅವಳಿಗೆ ನಿಪಿ-6 ರಂತೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ, 2 ನೇ ಪ್ರತಿವಾದಿ ಮಾತು ಕೇಳಿ ನನಗೆ 1 ತಿಂಗಳ ಕಾಲಾವಕಾಶ ನೀಡಿದರೂ ಕೂಡಾ ನಾನು ನೋಂದಣಿ ಮಾಡಿಕೊಳ್ಳದೇ ಇರುವ ಕಾರಣ 2 ನೇ ಪ್ರತಿವಾದಿಗೆ ನೋಂದಣಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತಾನು ಮಧ್ಯಸ್ತಿಕೆ ವಹಿಸಿಕೊಂಡು, ನನಗೆ 1 ತಿಂಗಳ ಕಾಲಾವಕಾಶ ಕೊಟ್ಟರೂ ಕೂಡಾ ನಾನು ನೋಂದಣಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-3 ರಲ್ಲಿ ತಿದ್ದುಪಡೆಯಾದ ಜಾಗದಲ್ಲಿ 1 ನೇ ಪ್ರತಿವಾದಿ ಸಹಿ ಪಡೆದಿಲ್ಲ ಎಂದರೆ ಸರಿ. ನಿಪಿ-3 ರ ಕರಾರು ಪತ್ರದ ಪ್ರಕಾರ ನಾನು ಶರತ್‌ನ್ನು ಉಲ್ಲಂಘಿಸಿದ್ದರಿಂದ ನಾನು ಮರಳಿ ಮುಂಗಡ ಹಣವನ್ನು ಪಡೆಯಲು ಅರ್ಹರನು ಇರುವುದಿಲ್ಲ ಹಾಗೂ ನನಗೆ ಬರೆದುಕೊಟ್ಟ ಕ್ರಯ ಕರಾರು ಪತ್ರ ರದ್ದಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮೇಲೆ ಇಂತಹ ಒಂದು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: 2 ನೇ ಪ್ರತಿವಾದಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ:</u>

(ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**